# ಗಾಂಧಿನಗರ ಪೋಸ್ಟ್



## ಅಪ್ಪ-ಮಗಳ ಜುಗಲ್‌ಬಂದಿ

'ನನ್ನ ಅಪ್ಪ ಅತ್ಯುತ್ತಮ ತಂತ್ರಜ್ಞ. ಅವರ ಸಿನಿಮಾಗಳ ಬಗ್ಗೆ ನನಗೆ ಸಿಕ್ಕಾಪಟ್ಟೆ ಅಭಿಮಾನ. 'ಶಿವ' ಚಿತ್ರವನ್ನು ಐದು ಸಲ ನೋಡಿದ್ದೇನೆ. ಅವರ ಎಲ್ಲ ಸಿನಿಮಾಗಳೂ ನನಗಿಷ್ಟ'. ಹೀಗೆಂದು ಪಟಪಟನೆ ಹೇಳುವ ಶ್ರಾವ್ಯ, ಇದೀಗ ಅಪ್ಪನ ನಿರ್ದೇಶನದ ಚಿತ್ರದಲ್ಲಿ ಅಭಿನಯಿಸಲು ತುದಿಗಾಲಲ್ಲಿ ನಿಂತಿದ್ದಾರೆ.

ನಿರ್ದೇಶಕ ಓಂಪ್ರಕಾಶ್ ರಾವ್ ಮತ್ತು ನಟಿ ರೇಖಾ ದಾಸ್ ಅವರ ಮುದ್ದಿನ ಮಗಳು ಶ್ರಾವ್ಯ. ಅಪ್ಪ ಅಮ್ಮನ ನೆರಳು ದಾಟಿ, ನಟಿಯಾಗಿ ತನ್ನದೇ ಅಸ್ತಿತ್ವ ಕಂಡುಕೊಳ್ಳುವ ತವಕ ಈ ತರುಣಿಯದು. 'ಓಂಪ್ರಕಾಶ್ ಮತ್ತು ರೇಖಾ ದಾಸ್ ಅವರ ಮಗಳೆಂದು ಹೇಳಿಕೊಳ್ಳಲು ಹೆಮ್ಮೆಪಡುತ್ತೇವೆ. ಆದರೆ, ಅವರ ಹೆಸರನ್ನು ಸ್ವಂತ ಲಾಭಕ್ಕೆ ಎಲ್ಲಿಯೂ ಬಳಸಿಕೊಂಡಿಲ್ಲ, ಬಳಸಿಕೊಳ್ಳುವುದಿಲ್ಲ. ಶ್ರಾವ್ಯ ಎಂದು ನನ್ನನ್ನು ಗುರ್ತಿಸಿಕೊಳ್ಳುವುದೇ ಇಷ್ಟ' ಎನ್ನುವ ಅವರೊಳಗೆ ಸ್ವಾಭಿಮಾನಿ ತರುಣಿಯೊಬ್ಬಳು ಇಣುಕುತ್ತಾಳೆ.

ಶ್ರಾವ್ಯ ನಟನೆಯ ಚೊಚ್ಚಿಲ ಚಿತ್ರ 'ಲೂಸ್‌ಗಳು' ತೆರೆಕಂಡಿದೆ. ಇದರ ಬೆನ್ನಿಗೆ 'ರೋಸ್' ಚಿತ್ರದಲ್ಲಿ ಅವಕಾಶ ದೊರೆತಿದೆ. ಇಷ್ಟು ಮಾತ್ರವಲ್ಲ, ನನ್ನ ಹೊಸ ಚಿತ್ರಕ್ಕೆ ನನ್ನ ಮಗಳೇ ನಾಯಕಿ ಎಂದು ಓಂಪ್ರಕಾಶ್ ಹೇಳಿಕೊಂಡಿದ್ದಾರೆ. ಮಗಳ ಪ್ರತಿಭೆಯ ಬಗ್ಗೆ ಅವರಿಗೆ ಅಪರಿಮಿತ ವಿಶ್ವಾಸ. ಕನ್ನಡ ಚಿತ್ರರಂಗದಲ್ಲಿ ಅಭಿನೇತ್ರಿಯಾಗಿ ಶ್ರಾವ್ಯ ನೆಲೆ ಕಂಡುಕೊಳ್ಳುವ ವಿಶ್ವಾಸ ಅವರದು. ಹೀಗೆ, ಪರಸ್ಪರರ ಪ್ರತಿಭೆಯ ಬಗ್ಗೆ ಗೌರವ ಇಟ್ಟುಕೊಂಡ ಅಪ್ಪ–ಮಗಳು ಚಿತ್ರವೊಂದರಲ್ಲಿ ಒಟ್ಟಾಗುತ್ತಿರುವುದು ಕುತೂಹಲ ಹುಟ್ಟಿಸುವಂತಿದೆ. ಆದರೆ, ಓಂಪ್ರಕಾಶ್ ಹೇಳಿಕೇಳಿ ಸಾಹಸ ಪ್ರಧಾನ ಚಿತ್ರಗಳ ನಿರ್ದೇಶಕ. ಅವರ ಸಿನಿಮಾಗಳಲ್ಲಿ ನಾಯಕಿ ಕರಿಬೇವಿನ ಎಸಳು ಇದ್ದಂತೆ. ಮಗಳ ಕಾರಣದಿಂದಾದರೂ ಓಂಪ್ರಕಾಶ್ ಚಿತ್ರದ ನಾಯಕಿಯ ವರ್ಚಸ್ಸು ಹೆಚ್ಚಾಗುತ್ತದೇನೊ ನೋಡಬೇಕು.

## ಜಯತೀರ್ಥರ 'ಟೋನಿ' ಟರ್ನ್!

'ನಮ್ಮ ಸಿನಿಮಾ ಅತೃಪ್ತ ಮನಸ್ಸುಗಳನ್ನು ರೂಪಿಸುವುದಿಲ್ಲ. ಬದಲಿಗೆ, ನೋಡುಗರಲ್ಲಿ ಜೀವನದ ಬಗ್ಗೆ ಆತ್ಮವಿಶ್ವಾಸ ಹೆಚ್ಚಿಸುತ್ತದೆ'.

'ನಮ್ಮ ಸಿನಿಮಾ ಭೂರಿ ಭೋಜನದ ನಡುವಿನ ಆಯುರ್ವೇದದ ಗುಳಿಗೆ'.

ನಿರ್ದೇಶಕ ಜಯತೀರ್ಥ ಅವರ ಮಾತುಗಳಿವು. 'ಟೋನಿ' ಚಿತ್ರವನ್ನು ತೆರೆ ಕಾಣಿಸುತ್ತಿರುವ ಸಂದರ್ಭದಲ್ಲಿ ಜಯತೀರ್ಥ ಅವರ ಮೇಲಿನ ಮಾತುಗಳೇ ಚಿತ್ರದ ಗುಣಮಟ್ಟವನ್ನು ಧ್ವನಿಸುವಂತಿವೆ. 'ಒಲವೇ ಮಂದಾರ'ದಂಥ ಅಪರೂಪದ ಪ್ರೇಮ ಕಾವ್ಯ ಸೃಷ್ಟಿಸಿದ ನಿರ್ದೇಶಕರ ಸಿನಿಮಾ ಎನ್ನುವ ಕಾರಣದಿಂದಲೇ 'ಟೋನಿ'ಯ ಬಗೆಗಿನ ನಿರೀಕ್ಷೆಗಳೂ ಹೆಚ್ಚಿವೆ. 'ಒಲವೇ ಮಂದಾರ'ಕ್ಕಿಂತಲೂ ಸಂಪೂರ್ಣ ಭಿನ್ನ ಚಿತ್ರ ಎನ್ನುವುದು 'ಟೋನಿ'ಯ ಬಗ್ಗೆ ಅವರ ಬಣ್ಣನೆ.

'ಟೋನಿ'ಯಾಗಿ ಕಾಣಿಸಿಕೊಂಡಿರುವ ಶ್ರೀನಗರ ಕಿಟ್ಟಿ ಅವರಿಗೂ ಚಿತ್ರದ ಬಗ್ಗೆ ಅಪಾರ ನಿರೀಕ್ಷೆ. 'ಬಾಲ್‌ಪೆನ್' ನಂತರ ಅವರು ನಿರ್ಮಿಸುತ್ತಿರುವ ಎರಡನೇ ಚಿತ್ರವಿದು. 'ಬಾಲ್‌ಪೆನ್' ಕಲಾತ್ಮಕ ನೆಲೆಯ ಚಿತ್ರವಾದರೆ, 'ಟೋನಿ' ಕಮರ್ಷಿಯಲ್ ನೆಲೆಗಟ್ಟಿನ ಪ್ರಯೋಗಶೀಲ ಸಿನಿಮಾ. 'ಈ ಸಿನಿಮಾ ಗೆಲುವನ್ನು ತಂದುಕೊಡುವುದರ ಜೊತೆಗೆ ತಮ್ಮ ವರ್ಚಸ್ಸನ್ನೂ ಬದಲಿಸಲಿದೆ' ಎನ್ನುವುದು ಕಿಟ್ಟಿ ನಿರೀಕ್ಷೆ.

ಐಂದ್ರಿತಾ ರೇ ಚಿತ್ರದ ನಾಯಕಿ. ಶರಣ್, ಸುಚೇಂದ್ರಪ್ರಸಾದ್, ಅಚ್ಯುತ ಮುಂತಾದವರ ಜೊತೆಗೆ ರಂಗಭೂಮಿಯ ಪ್ರತಿಭೆಗಳೂ ತಾರಾಗಣದಲ್ಲಿದ್ದಾರೆ.

■ ರಘು

